**ಸಾಕ್ಷಿಯನ್ನು ಕರೆಸಿ ದಿನಾಂಕ 05.07.2018 ರಂದು ಪ್ರಮಾಣೀಕರಿಸಲಾಯಿತು. ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲು ಃ** ಪ್ರತಿವಾದಿ ಪರ ವಕೀಲರಿಂದ ಃ-

ನಮ್ಮ ತಂದೆ ನಮ್ಮ ತಾಯಿಗೆ ವಿಲ್ ಮಾಡಿದ್ದರು. ವಿಲ್ ದಿನಾಂಕವನ್ನು ಮರೆತಿದ್ದೇನೆ. ನಾನು ಕಾಳಮ್ಮನ ಮೊದಲನೇ ಮಗ ಎಂದರೆ ಸರಿ. ಕಾಳಮ್ಮನವರು ಯಾವುದೇ ದಾಖಲೆಯನ್ನು ಬರೆದಿರುವುದಿಲ್ಲ. ನಮ್ಮ ತಮ್ಮನ ಹೆಂಡತಿ ಜಯಂತಿ ಹೆಸರಿಗೆ ಖಾತೆ ಆಗಿದೆ ಎಂದರೆ ಸಾಕ್ಷಿಯು ಸುಳ್ಳು ದಾಖಲೆ ಸೃಷ್ಟಿಸಿಕೊಂಡಿದ್ದಾರೆ. ಸುಜಾತ, ಕೃಷ್ಣಮೂರ್ತಿ, ಜಯಂತಿ ಮತ್ತು ನನ್ನ ಹೆಸರಿಗೆ ಪ್ರತ್ಯೇಕವಾಗಿ ಖಾತೆಗಳು ಆಗಿದೆ ಎನ್ನುವ ವಿಷಯ ನನಗೆ ಗೊತ್ತಿಲ್ಲ. ನನ್ನ ತಾಯಿ ಸುಜಾತರವರ ಹೆಸರಿಗೆ ಖಾತೆ ಮಾಡಲು ನನ್ನ ತಕರಾರು ಇಲ್ಲ ಎಂದು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಿಃ 21.08.2000 ರಲ್ಲಿ ನಮ್ಮ ತಂದೆಯು ವಿಲ್ ಮಾಡಿರುವುದು ಸತ್ಯವಿರುತ್ತದೆ. ಅದರ ಮೂಲಪ್ರತಿ ನನ್ನ ಹತ್ತಿರ ಇರುವುದಿಲ್ಲ. ಸದರಿ ಮೂಲಪ್ರತಿ ನಮ್ಮ ತಾಯಿಯ ಹತ್ತಿರ ಇದ್ದು ಅವರು ನಿಧನ ಹೊಂದಿದ್ದಾರೆ. ಸದರಿ ಮೂಲಪ್ರತಿ ಏನು ಆಯಿತು ಎಂದು ನನಗೆ ಗೊತ್ತಿಲ್ಲ. ನಮ್ಮ ತಾಯಿಯು ಯಾರಿಗೂ ದಾನಪತ್ರವನ್ನು ಬರೆದುಕೊಟ್ಟಿಲ್ಲ. ಸುಜಾತರವರು ದಾವಾಸ್ವತ್ತಿನಲ್ಲಿ ಎಷ್ಟು ವರ್ಷಗಳಿಂದ ವಾಸವಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸುಜಾತರವರ ಗಂಡನ ಹೆಸರು ನನಗೆ ಗೊತ್ತಿಲ್ಲ.

ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಪಾಟಿ ಸವಾಲನ್ನು ಮುಂದೂಡಲಾಯಿತು.

**(ನನ್ನ ಉಖ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

ಓ. ಹೇ. ಮತ್ತು ಸ. ಇ

**(ನಾಗವೇಣಿ)**

5ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು
ನ್ಯಾಯಾಂಗಣ 13, ಬೆಂಗಳೂರು ನಗರ.

**ಸಾಕ್ಷಿಯನ್ನು ಕರೆಸಿ ದಿನಾಂಕ 07.02.2019 ರಂದು ಪ್ರಮಾಣೀಕರಿಸಲಾಯಿತು.**

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲು ঃ** ಪ್ರತಿವಾದಿ ಪರ ಶ್ರೀ ಕೆ.ವಿ.ಪಿ. ವಕೀಲರಿಂದ ঃ-

ನಾನು ಸೌತ್ ಇಂಡಿಯ ಗ್ಯಾಸ್ ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದೇನೆ. ನಾನು ಡಿಪ್ಲಮೊ ಓದಿದ್ದೇನೆ. ಸರ್ವೆ ನಂ.22/8, 23/4, 23/8ರ ಜಮೀನಗಳಲ್ಲಿ ಒಟ್ಟು 7 ಎಕರೆ ಜಮೀನುಗಳಿದ್ದು ಅದರಿಲ್ಲಿ ದಾವ ಸ್ವತ್ತು ಇರುತ್ತದೆ. ಮೇಲ್ಕಂಡ ಸರ್ವೆ ನಂ ಮಾಲಿಕರ ಹೆಸರು ಒಂಬಯ್ಯ, ಪುಟ್ಟರುದ್ರಪ್ಪ ಮತ್ತು ಚಿಕ್ಕಮುನಿಯಪ್ಪ. ಈ ದಾವ ಸಲ್ಲಿಸಿದ ನಂತರ ಮೇಲ್ಕಂಡ ವ್ಯಕ್ತಿಗಳು ಸ್ವತ್ತಿನ ಮಾಲಿಕರು ಎಂದು ಗೊತ್ತಯಿತು. 13.08.2001ರಲ್ಲಿ ದಾವ ಸ್ವತ್ತನ್ನು ಖರೀದಿ ಮಾಡಿದೇನು. ಕೆ.ಸಿ.ಕೃಷ್ಣಯ್ಯರವರಿಂದ ನಾನು ಖರೀದಿ ಮಾಡಿದ್ದೇನೆ. ಎಸ್.ಗಂಗಾಧರ ಎನ್ನುವವರು ಲೇಔಟ್‌ನಲ್ಲಿ ಮನೆ ಕಟ್ಟಿದ್ದು ಅವರ ಮುಖಾಂತರ ಕೆ.ಸಿ.ಕೃಷ್ಣಯ್ಯರವರು ನನಗೆ ಪರಿಚಯವಾದರು. 1986ರಲ್ಲಿ ಮದನ್ ಮತ್ತು ಸೋಮಶೇಖರ್‌ರವರಿಗೆ ಲೇಔಟ್ ವಿಂಗಡಿಸಲು ಜಿ.ಪಿ.ಎ ಅನ್ನು ಅದರ ಮೂಲ ಮಾಲೀಕರು ಬರೆದು ಕೊಟ್ಟಿದ್ದು ಸದರಿ ದಾಖಲೆಯನ್ನು ನಾನು ನೋಡಿದ್ದೇನೆ. ಇತರೆ ಯಾವ ಯಾವ ದಾಖಲೆಗಳನ್ನು ನೋಡಿದ್ದೇನೆ ಎಂದು ನನಗೆ ಜ್ಞಾಪಕದಲ್ಲಿ ಇಲ್ಲ.

**<u>ಮುಂದುವರೆದ ಪಾಟಿ ಸವಾಲಿಗೆ ಸಮಯ ನೀಡಲಾಯಿತು</u>**

**(ನನ್ನ ಉಖ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

ಓ. ಹೇ. ಮತ್ತು ಸ. ಇ

**(ನಾಗವೇಣಿ)**
5ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು
ನ್ಯಾಯಾಂಗಣ 13, ಬೆಂಗಳೂರು ನಗರ.